**O.S** **370/2015**

ಪಿ.ಡಬ್ಲೂ: **1**

ದಿನಾಂಕ:**04-08-2022** ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಬಿ ಎ ಎಸ್ ವಕೀಲರಿಂದ:**

ನಾನು ಅನಕ್ಷರಸ್ಥೆ. ನನ್ನ ಮದುವೆ 1998 ರಲ್ಲಿ ಆಗಿರುತ್ತದೆ. ನನ್ನನ್ನು ಶನಿವಾರ ಸಂತೆಯ ನಜೀರ ಪಾಷಾರವರಿಗೆ ಮದುವೆ ಮಾಡಿಕೊಡಲಾಗಿತ್ತು. ಮದುವೆಯಾದ ನಂತರ ನೀವು ಗಂಡನ ಮನೆಯಲ್ಲಿ ವಾಸವಾಗಿದ್ದೀರಿ ಎಂದರೆ ಸರಿ. ನೀವು ಮದುವೆಯಾದ ನಂತರ ನಿಮ್ಮ ತಂದೆಯೊಬ್ಬರೇ ಕಾಳೇನಹಳ್ಳಿಯಲ್ಲಿ ವಾಸವಾಗಿದ್ದರು ಎಂದರೆ ಸಾಕ್ಷಿ ತಂದೆ ತಾಯಿ ಹಾಗೂ ತಂಗಿ ವಾಸವಾಗಿದ್ದರು ಎಂದರೆ ಸರಿ. ನನ ತಂದೆ ತಾಯಿ ಹಾಗೂ ತಂಗಿಗೆ ಸಂಬಂಧಿಸಿದ ಪಡಿತರ ಚೀಟಿ ಇದೆ. ಸದರಿ ಪಡಿತರ ಚೀಟಯನ್ನು ನ್ಯಾಯಾಲಯಕಕ್ಕೆಂ ಹಾಜರುಪಡಿಸಿರುತ್ತೇನೆ. ಗುರುದೇವರವನ್ನು ನೀವು ನೋಡಿದ್ದೀರಾ ಎಂದರೆ ಸಾಕ್ಷಿ ನೊಡಿದ್ದೇನೆ ಎಂದು ಹೇಳುತ್ತಾರೆ. ಗುರುದೇವ ರವರ ತಂದೆ ತಾಯಿಯ ಹೆಸರೇನು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಗುರುದೇವರವರಿಗೆ ಸೇರಿದ ಸರ್ವೇ ನಂಬರ್ ಹಾಗೂ ಅದರ ವಿಸ್ತೀರ್ಣ ಎಷ್ಟು ಎಂದರೆ ಸಾಕ್ಷಿ ಸರ್ವೇ ನಂಬರ್ ಗೊತ್ತಿಲ್ಲ , ವಿಸ್ತೀರ್ಣ 1 ಎಕರೆ 20 ಗುಂಟೆ ಇರಬಹುದು ಎಂದು ಹೇಳುತ್ತಾರೆ. ಗುರುದೇವ ರವರಿಗೆ ಸೇರಿದ ಜಮೀನಿನ ಚಕ್ಕುಬಂಧಿ ಎನೂ ಎಂದರೆ ಸಾಕ್ಷಿ ಪೂ-ಅಬ್ದಲ್ ಮಜೀದ್, ಪ- ವೆಂಕಟಾ , ಉ-ನಾಲೆ, ದ- ಗ್ರಾಮ ಠಾಣಾ .

ನೀವು ಹುಟ್ಟಿ ಬೆಳೆದಲ್ಲಾ ಶನಿವಾರ ಸಂತೆಯಲ್ಲೆ ಎಂದರೆ ಸಾಕ್ಷಿ ಇಲ್ಲಾ ಕಾಳೇನಹಳ್ಳಿಯಲ್ಲಿ ಎಂದು ಹೇಳುತ್ತಾರೆ. ನೀವು ಕಾಳೇನಹಳ್ಳಿಯಲ್ಲಿ ಹುಟ್ಟಿ, ಬೆಳೆದದ್ದು ಎಂದು ತೋರಿಸಲು ಜನನ ನೊಂದಣಿ ಪ್ರಮಾಣ ಪತ್ರವನ್ನು ಪಡೆದಿದ್ದೀರಾ ಎಂದರೆ ಸಾಕ್ಷಿ ನಾನು ತೆಗೆದುಕೊಂಡಿಲ್ಲ ಎಂದು ಹೇಳುತ್ತಾರೆ. ನೀವು ಈಗ ಜನನ ನೊಂದಣಿ ಪ್ರಮಾಣ

ಪತ್ರವನ್ನು ತೆಗೆದುಕೊಂಡು ನ್ಯಾಯಾಲಯಕ್ಕೆ ಕೊಡಲು ತೊಂದರೆ ಇದೆ ಎಂದರೆ ಸಾಕ್ಷಿ ತೊಂದರೆ ಇದೆ ಎಂದು ಹೇಳುತ್ತಾರೆ. ನಿಮಗೆ ಏನು ತೂಂದರೆ ಇದೆ ಎಂದರೆ ಸಾಕ್ಷಿ ನಾನು ಓದಿಲ್ಲದೆ ಇರುವುದರಿಂದ ತೆಗೆದುಕೊಳ್ಳಲು ಆಗುವುದಿಲ್ಲ ಎಂದು ಹೇಳುತ್ತಾರೆ.

ನೀವು ನಿಮ್ಮ ತಂಗಿ ಹಾಗೂ ತಂದೆ ತಾಯಿ ಕಾಳೇನಹಳ್ಳಿ ಯಲ್ಲಿ ವಾಸ ಇಲ್ಲ, ನಿಮ್ಮ ತಂದೆ ಯೊಬ್ಬರೆ ಕಾಳೇನಹಳ್ಳಿಯಲ್ಲಿ ವಾಸ ಇದ್ದು, ನೀವುಗಳು ಶನಿವಾರ ಸಂತೆಯಲ್ಲಿ ವಾಸ ಇದ್ದೀರಿ ಎಂದರೆ ಸರಿಯಲ್ಲ.

ನಿಮ್ಮ ತಂದೆ ದಾವಾ ಆಸ್ತಿಯನ್ನು ವ್ಯವಸಾಯ ಮಾಡುತ್ತಿದ್ದರು ಅವರಿಗೆ ವಯಸ್ಸಾದ ಮೇಲೆ ಆಸ್ತಿಯನ್ನು ನಿಮ್ಮ ತಂದೆ ಪ್ರತಿವಾದಿಗಳ ತಂದೆ ಗುರುದೇವ ರವರಿಗೆ ಗುತ್ತಿಗೆಗೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿಯರ ತಂದೆ ದಾವಾ ಆಸ್ತಿಯನ್ನು ಗುತ್ತಿಗೆ ಮಾಡಿಕೊಂಡು ಬರುತ್ತಿದ್ದು, ನೀವಾಗಲಿ, ನಿಮ್ಮ ತಂಗಿ , ತಾಯಿಯಾಗಲಿ ತಂದೆಯ ಯೋಗಕ್ಷೇಮ ನೋಡಿಕೊಳ್ಳುತ್ತಿರಲ್ಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯವರು ಮತ್ತು ಗುರುದೇವ ರವರ ತಂದೆಯವರು ನಿದಿಮ್ಮ ತಂದೆಯ ಯೋಗಕ್ಷೆಮವನ್ನು ನೊಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

ನಿಮ್ಮ ತಂದೆ ಯನ್ನು ನೀವು ಉಡಾಪೆ ಮಾಡಿದ್ದರಿಂದ, ಪ್ರತಿವಾದಿಯವರು , ಅವರ ತಂದೆ ಗುರುದೇವ ರವರು ನಿಮ್ಮ ತಂದೆಯನ್ನು ನೋೕಡಿಕೊಂಡಿದ್ದರಿಂದ ನಿಮ್ಮ ತಂದೆ ಪ್ರತಿವಾದಿಯ ತಂದೆಗೆ ಗುರುದೇವ ರವರಿಗೆ ನೊಂದಾಯಿತ ಮರಣ ಶಾಸನ ಪತ್ರವನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿಃ10.12.1996 ರಂದು ನಿಮ್ಮ ತಂದೆ ಪ್ರತಿವಾದಿಯ ತಂದೆ ಗುರುದಂೀವ ರವರಿಗೆ ಮರಣ ಶಾಸನ ಪತ್ರವನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನಿಮ್ಮ ತಂದೆ ಯಾವಾಗ ತೀರಿಕೊಂಡರು ಎಂದರೆ ಸಾಕ್ಷಿ 2004 ರಲ್ಲಿ ಎಂದು ಹೇಳುತ್ತಾರೆ. ನಿಮ್ಮ ತಂದೆ ತೀರಿಕೊಡಂ ನಂತರ ದಾವಾ ಆಸ್ತಿ ಯ ಖಾತೆಯನ್ನು ಪ್ರತಿವಾದಿಯರ ತಂದೆ ಗುರುದೇವರವರು ತಮ್ಮ ಹೆಸರಿಗೆ ಮಾಡಿಸಿಕೊಳ್ಳಲು ಮೂಲ

ಮರಣ ಶಾಸನ ಪತ್ರ ಮನೆಯಲ್ಲಿ ಕಳೆದು ಹೋಗಿದ್ದರಿಂದ ಖಾತೆ ಮಾಡಿಸಿಕೊಂಡಿರಲಿಲ್ಲ ಎಂದರೆ ಸಾಕ್ಷಿ ನನ್ನ ತಂದೆ ಮರಣ ಶಾಸನ ಪತ್ರ ಮಾಡಿಲ್ಲ ಎಂದು ಹೇಳುತ್ತಾರೆ. ದಾವಾ ಅಸಿತಯಲ್ಲಿ ನಿದಿಮ್ಮ ತಂದೆ ತೀರಿಕೊಂಡಾಗಿನಿಂದ ಇಲ್ಲಿಯವರೆಗೂ ಪ್ರತಿವಾದಿಯರೇ ಸ್ವಾ ಧೀನ ಇದ್ದಾರೆ ಎಂದರೆ ಸರಿಯಲ್ಲ.

ಪ್ರತಿವಾದಿಯರ ತಂದೆ ಗುರುದೇವ ಯಾವಾಗ ತೀರಿಕೊಂಡರು ಎಂದರೆ ಸಾಕ್ಷಿ ನೆನಪಿಲ್ಲ ಎಂದು ಹೇಳುತ್ತಾರೆ. ಗುರುದೇವ ರವರು 2015 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಗುರುದೇವ ರವರ ತೀರಿಕೋಂಡ ನಂತರ ಪ್ರತಿವಾದಿಯವರು ಮನೆಯನ್ನು ಸ್ವಚ್ಛಗೊಳಿಳುವ ಕಾಲಕ್ಕೆ ಮೂಲ ಮರಣ ಶಾಸನ ಪ್ರತಿವಾದಿಯವರಿಗೆ ದೊರಕಿರುತ್ತದೆ ಎಂದರೆ ಸಾಕ್ಷಿ ಮಾಡಿಸಿಯೇ ಕೊಟ್ಟಿಲ್ಲ ಎಂದು ಹೇಳುತ್ತಾರೆ. ಗುರುದೇವ ರವರ ಹೆಂಡತಿಯ ಹೆಸರು ಜಾನಕಮ್ಮ. ಮರಣ ಶಾಸನ ದೊರೆತ ನಂತರ ಪ್ರತಿವಾದಿಯರು ಖಾತೆ ಮಾಡಲು ಅರ್ಜಿಯನ್ನು ಕೊಟ್ಟಿದ್ದರು ಎಂರೆ ಸಾಕ್ಷಿ ನನ್ನ ಹೆಸರಿಗೆ ಖಾತೆ ಆಗಿದೆ ಎಂದು ಹೇಳುತ್ತಾರೆ. ಪ್ರತಿವಾದಿಯರು ಅರ್ಜಿಪಿಕೊಟ್ಟ ವಿಚಾರ ಕೊಟ್ಟ ವಿಚಾರ ನೀವು ಅರ್ಜಿ ಕೊಟ್ಟು ಖಾತೆ ಮಾಡಿಸಿಕೊಂಡಿರಾತ್ತೀರಾ ಎಂದರೆ ಸರಿಯಲ್ಲ. ನೀವು ಖಾತೆ ಮಾಡಿಸಿಕೊಂಡ ನಂತರ ದಾವಾ ಆಸಿತ ಬಳಿ ಹೋಗಿ ಪ್ರತಿವಾದಿಯರ ಸ್ವಾಧೀನಕ್ಕೆ ತೊಂದರೆ ಕೊಟ್ಟಿರುತ್ತೀರಾ ಎಂದರೆ ಸರಿಯಲ್ಲ. ನೀವು ತೊಂದರೆ ಕೊಟ್ಟಿದ್ದರಿಂದ ಪೊಲೀಸರ ಸಮಕ್ಷಮ ದೂರು ದಾಖಲಿಸಿದ್ದು, ಪ್ರಕರಣವು ಸಿವಿಲ್ ಸ್ವರೂಪದಾಗಿದ್ದರಿಂದ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳುವಂತೆ ತಿಳಿಸಿದ್ದು ಹಾಗಾಗಿ ಪ್ರತಿವಾದಿಯವರು 385/2015 ರಂತೆ ದಾವೆ ಹೂಡಿರುತ್ತಾರೆ ಎಂದರೆ ನಾವೇದೂರು ದಾಖಲಿಸಿದ್ದು ಎಂದು ಹೇಳುತ್ತಾರೆ. ಪ್ರತಿವಾದಿಯವರು 2015 ರಲ್ಲಿ ದಾವೆ ಹೂಡಿದಾಗ ನಿಮಗೆ ಪ್ರತಿವಾದಿಯರಿಗೆ ಮರಣ ಶಾಸನ ಅದ ವಿಚಾರ ಗೊತ್ತಾಗಿರುತ್ತದೆ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಮರಣ ಶಾಸನ ಪ್ರತಿವಾದಿಯ ತಂದೆ ಗುರುದೇವ ರವರಿಗೆ ಆದ ವಿಚಾರ ನಿಮಗೇ ಯಾವಾಗ ಗೋತ್ತಾಯಿತು ಎಂದರೆ ಸಾಕ್ಷಿ ಖಾತೆ

ಆಗುವುದಕ್ಕಿಂತ ಮುಂಚಿತವಾಗಿ ಗೂತ್ತಾಯಿತು ಎಂದು ಹೇಳತ್ತಾರೆ. ಪ್ರತಿವಾದಿಯರ ಹೇಸರಿಗೆ ಮರಣ ಶಾಸನ ಆದ ನಂತರ ನಿದಿವೇನಾದರೂ ಕ್ರಮ ಕೈಗೊಂಡಿದ್ದೀರಾ ಎಂದಂರೆ ಸಾಕ್ಷಿ ಇಲ್ಲ ಆಮೇಲೆ ಹೊಡೆದಾಟಕ್ಕೆ ಬಂದರು ಎಂದು ಹೇಳುತ್ತಾರೆ.

2015-16 ರಲ್ಲಿ ದಾವಾ ಆಸ್ತಿಯಲ್ಲಿ ಜೋಳದ ಬೆಳೆಯನ್ನು ಬೆಳೆಯಲಾಗಿತ್ತು. ಈ ದಾವೆಯಲ್ಲಿ ಪ್ರತಿವಾದಿಯವರು ತಕರಾರಿನಲ್ಲಿ ಬರೆದುಹ ಹಾಕಿರುವ ವಿಚಾರ ತತಿಳಿದುಕೋಡಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಈ ದಾವೆಯನ್ನು ಯಾವ ವಿಚಾರವಾಗಿ ಹೂಡಿದ್ದೀರಾ ಎಂದರೆ ಸಾಕ್ಷಿ ಪ್ರತಿವಾದಿಯ ರ ಹಾಗೂ ನಮ್ಮ ಜಮಿಲನು ಅಕ್ಕ ಪಕ್ಕ ಇದ್ದು ಪ್ರತಿವಾದಿಯರು ಜಮೀನಿಗೆ ಹೋಗಲು ಬಿಡುವುದಿಲ್ಲ ಹಾಗಾಗಿ ಗಲಾಟೆ ಮಾಡಿ ಬಿಡುತ್ತಾರೆ ಹಾಗಾಗಿ ದಾವಾ ಹೂಡಿದ್ದೇನೆ ಎಂದು ಹೇಳುತ್ತಾರೆ. ಪ್ರತಿವಾದಿಯರು ಯಾಾವ ದಿನಾಂಕ, ತಿಂಗಳು , ವರ್ಷದಂದು ಗಲಾಟೆ ಮಾಡಿರುತ್ತಾರೆ ಎಂದರೆ ಸಾಕ್ಷಿ 2014 ಜೂನ್ ತಿಂಗಳಿನಲ್ಲಿ ಮಾಡಿದ್ದು, ದಿನಾಂಕ ಗಗೊತ್ತಿಲ್ಲ. ಗಲಾಟೆಯನ್ನು ನೋಡಿದವರು ಇದ್ದಾರೆ.

ನಿಮ್ಮ ತಂದೆನಯೊಬ್ಬರೇ ಕಾಳೇನಹಳ್ಳಿಯಲ್ಲಿ ವಾಸ ವಾಗಿದ್ದು, ನೀವು ಶನಿವಾರ ಸಂತೆಯಲ್ಲಿ ವಾಸ ಇದ್ದು, ಜಮೀನಿನ ವಿಚಾರ ಗೊತ್ತು ಎಂದರೆ ಸರಿಯಲ್ಲ. ಪ್ರತಿವಾದಿಯ ತಂದೆ ಗುರುದೇವ ರವರಿಗೆ ಮರಣ ಶಾಸನ ಪತ್ರ ಮಾಡಿಕೊಟ್ಟಿರುವ ವಿಚಾರ ಗೊತ್ತಿದ್ದರು ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷವನ್ನು ಹೇಳುತ್ತೀದ್ದೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಪ್ರತಿವಾದಿಯರೇ ಹಕ್ಕು ದಾರರಾಗಿದ್ದು ದಾವಾ ಆಸ್ತಿಯ ಮೇಲೆ ನಿಮಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಖಾತೆಯನ್ನು ಮಾಡಿಸಿಕೊಂಡಿರುವ ಒಂದೇ ಉದ್ದೇಶದಿಂದ ಪ್ರತಿವಾದಿಯರ ಸ್ವಾ ಧೀನಕ್ಕೆ ತೊಂದರೆ ಕೊಡುತ್ತೀದಿಐಲರಾ ಎಂದರೆ ಸರಿಯಲ್ಲ. ನೀವು ದಾವಾ ಆಸ್ತಿಯ ಸ್ವಾಧಿನದಲ್ಲಿ ಯಾವತ್ತು ಇಲ್ಲ, ಪ್ರತಿವಾದಿ ತಂದೆ ಗುರುದೇವ ರವರು ಬದುಕಿದ್ದಾಗ ಸ್ವಾಧೀನದಲ್ಲಿ ಇದ್ದು ಅವರ ನಂತರ ಪ್ರತಿವಾದಿಯರೇ ದಾವಾ ಆಸ್ತಿಯ ಸ್ವಾದೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.